ಅರವಿಂದ ಕೇಜ್ರಿವಾಲ್ ಅಣ್ಣಾ ಹಜಾರೆ ಹೋರಾಟ ಹೈಜಾಕ್ ಮಾಡಿದರು. ಅದಕ್ಕಿಂತ ಮೊದಲೇ ನೆಹರು ಅವರು ಗಾಂಧಿ ಹೆಸರನ್ನು ಹೈಜಾಕ್ ಮಾಡಿ ಗಾಂಧಿ ಹೆಸರನ್ನು ತಮ್ಮ ಕುಟುಂಬದೊಳಗೆ ತಂದುಬಿಟ್ಟರು.
● **ಜಗದೀಶ ಶೆಟ್ಟರ್** ಸಂಸದ ಬೆಳಗಾವಿ

ಕನ್ನಡಪ್ರಭ
ಬುಧವಾರ 25.12.2024

# ಮೂಲ, ಈಗಿನ ಕಾಂಗ್ರೆಸ್‌ಗೂ ಸಂಬಂಧ ಇಲ್ಲ

## ಕಾಂಗ್ರೆಸ್, ಗಾಂಧಿ ಹೆಸರನ್ನು ನೆಹರು ಕುಟುಂಬ ಹೈಜಾಕ್ ಮಾಡಿದೆ | ಸಂಸದ ಜಗದೀಶ ಶೆಟ್ಟರ ಆರೋಪ

● **ಕನ್ನಡಪ್ರಭ ವಾರ್ತೆ** ಬೆಳಗಾವಿ

ಮೂಲ ಕಾಂಗ್ರೆಸ್ ರಾಜಕೀಯ ಪಕ್ಷವಲ್ಲ. ಅದು ಸ್ವಾತಂತ್ರ್ಯ ಚಳವಳಿಗಾಗಿ ಹುಟ್ಟಿಕೊಂಡ ಸಂಸ್ಥೆ. ಮೂಲ ಕಾಂಗ್ರೆಸ್ಸಿಗೂ ಈಗಿನ ರಾಹುಲ್ ಗಾಂಧಿ ಕಾಂಗ್ರೆಸ್ ಎಂಬ ರಾಜಕೀಯ ಪಕ್ಷಕ್ಕೂ ಸಂಬಂಧವೇ ಇಲ್ಲ ಎಂದು ಮಾಜಿ ಸಿಎಂ, ಸಂಸದ ಜಗದೀಶ ಶೆಟ್ಟರ ಹೇಳಿದರು.

ಬೆಳಗಾವಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಆಗ ಬೇರೆ ರಾಜಕೀಯ ಪಕ್ಷಗಳಿರದ ಕಾರಣ ಎಲ್ಲರೂ ಇದೇ ಚಳವಳಿಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಹಿಂದಿನ ಕಾಂಗ್ರೆಸ್ ಹಾಗೂ ಗಾಂಧಿ ಹೆಸರನ್ನು ರಾಜಕಾರಣಿ ನೆಹರು ಕುಟುಂಬ ಹೈಜಾಕ್ ಮಾಡಿದೆ. ಮಹಾತ್ಮಗಾಂಧಿ ಕುಟುಂಬಕ್ಕೂ, ಈ ಗಾಂಧಿ ಕುಟುಂಬಕ್ಕೂ ರಕ್ತ ಸಂಬಂಧವೂ ಇಲ್ಲ ಎಂದವರು ಆರೋಪಿಸಿದರು.

ಬೆಳಗಾವಿಯಲ್ಲಿ ಕಾಂಗ್ರೆಸ್ ಅಧಿವೇಶನದ ಶತಮಾನೋತ್ಸವ ಆಚರಣೆ ಮಾಡುತ್ತಿದ್ದೀರಿ. ಗಾಂಧಿ ವಿಚಾರಕ್ಕೆ ಇವರ್ಯಾರು ಹೊಂದಿಕೊಂಡಿಲ್ಲ. ಕಾಂಗ್ರೆಸ್ ಪಕ್ಷ ಅದೆಷ್ಟು ಬಾರಿ ಒಡೆದಿದೆ. ಸಂಸ್ಥಾ ಕಾಂಗ್ರೆಸ್, ಇಂದಿರಾ ಕಾಂಗ್ರೆಸ್, ತೃಣಮೂಲ ಕಾಂಗ್ರೆಸ್ (ಟಿಎಂಸಿ), ನ್ಯಾಷನಲ್ ಕಾಂಗ್ರೆಸ್ (ಎನ್‌ಸಿಪಿ) ಹೀಗೆ ಹತ್ತಾರು ಪಕ್ಷಗಳಾಗಿದೆ. ಇವರದ್ದು ಯಾವ ಕಾಂಗ್ರೆಸ್? ಈ ಕಾಂಗ್ರೆಸ್ಸಿಗೂ ಗಾಂಧಿ ಕಾಂಗ್ರೆಸ್ಸಿಗೂ ಏನು ಸಂಬಂಧ? ಅರವಿಂದ ಕೇಜ್ರಿವಾಲ್ ಅಣ್ಣಾ ಹಜಾರೆ ಹೋರಾಟ ಹೈಜಾಕ್ ಮಾಡಿದರು. ಅದಕ್ಕಿಂತ ಮೊದಲೇ ನೆಹರು ಅವರು ಗಾಂಧಿ ಹೆಸರನ್ನು ಹೈಜಾಕ್ ಮಾಡಿ ಗಾಂಧಿ ಹೆಸರನ್ನು ತಮ್ಮ ಕುಟುಂಬದೊಳಗೆ ತಂದುಬಿಟ್ಟರು ಎಂದು ದೂರಿದರು. ಗಾಂಧಿ ತತ್ವಾದರ್ಶಗಳಿಗೆ ಕಾಂಗ್ರೆಸ್ ವಿರುದ್ಧವಾಗಿದೆ. ಗಾಂಧಿ ಕಾಂಗ್ರೆಸ್ ಪಕ್ಷವನ್ನು ವಿಸರ್ಜಿಸಿ ಎಂದಿದ್ದರು. ಆ ಮಾತಿಗೆ ವಿರುದ್ಧವಾಗಿ ಕಾಂಗ್ರೆಸ್ ಪಕ್ಷವಾಗಿ ಮುಂದುವರಿಯಿತು. ಗಾಂಧಿ ಅವರು ಗ್ರಾಮ ಸ್ವರಾಜ್ಯ, ಭ್ರಷ್ಟಾಚಾರ ವಿರೋಧಿಸಿದ್ದರು. ಈಗ ಭ್ರಷ್ಟಾಚಾರದ ಲೇಪ ಇರುವವರೆಲ್ಲರೂ ಗಾಂಧಿ ಹೆಸರಿನಲ್ಲಿ ರಾಜಕೀಯದ ಬೇಳೆ ಬೇಯಿಸಿಕೊಳ್ಳುತ್ತಿದ್ದಾರೆ ಎಂದು ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾಜಿ ಸಿಎಂ, ಸಂಸದ ಜಗದೀಶ ಶೆಟ್ಟರ್ ಮಾತನಾಡಿದರು, ಶಾಸಕ ಅಭಯ ಪಾಟೀಲ ಇತರರು ಇದ್ದರು.

### ಸಿ.ಟಿ. ರವಿ ಎಂದಿಗೂ ಕೆಟ್ಟ ಪದ ಬಳಸಿದವರಲ್ಲ

ಸಿ.ಟಿ.ರವಿ ಅವರು ಎಂದಿಗೂ ಕೆಟ್ಟ ಪದ ಬಳಸಿದವರಲ್ಲ. ಕಾರ್ಯಾಗಾರಗಳಲ್ಲಿ ಮಹಿಳೆಯರ ಬಗ್ಗೆ ಕೆಟ್ಟ ಪದ ಬಳಸುವುದನ್ನು ಸಮಾಜ ಒಪ್ಪುವುದಿಲ್ಲ. ಅಂತ ಶಬ್ದ ಬಳಸದಂತೆ ಮಾರ್ಗದರ್ಶನ ನೀಡಿದ್ದರು. ಅವರು ಆ ಪದ ಬಳಸಲು ಸಾಧ್ಯವಿಲ್ಲ. ಕೆಲ ವರ್ಷಗಳಿಂದ ರವಿ ಅವರನ್ನು ಹತ್ತಿರದಿಂದ ನೋಡಿದ್ದೇನೆ. ನನ್ನ ಹೇಳಿಕೆಯನ್ನು ಅಪಾರ್ಥ ಮಾಡಿಕೊಳ್ಳಲಾಗಿದೆ ಎಂದು ರವಿ ಹೇಳಿದ ಬಳಿಕ ಸಭಾಪತಿ ರೂಲಿಂಗ್ ನೀಡಿದ್ದಾರೆ. ವಿಧಾನಸೌಧ ಒಳಗಡೆ ಸ್ಪೀಕರ್ ಇಸ್ ಸುಪ್ರೀಂ. ಇದು ಪೊಲೀಸ್ ವ್ಯಾಪ್ತಿಗೂ ಬರಲ್ಲ. ಸುಪ್ರೀಂ ಕೋರ್ಟ್ ಕೂಡ ಪ್ರಶ್ನಿಸಲು ಸಾಧ್ಯವಿಲ್ಲದಷ್ಟು ಸಭಾಪತಿಯವರಿಗೆ ಮಹತ್ವ ಇರುವಾಗ ಪೊಲೀಸರು ಏಕಾಏಕಿ ಹೇಗೆ ವಿಧಾನಸೌಧದೊಳಗೆ ನುಗ್ಗಿ ಕಾನೂನು ಕೈಗೆ ತೆಗೆದುಕೊಂಡರು ಎಂಬ ಪ್ರಶ್ನೆಗೆ ಗೃಹ ಸಚಿವರು ಉತ್ತರಿಸಬೇಕು ಎಂದರು.

ಅಮಾಯಕರಾದ, ಏನು ತಪ್ಪು ಮಾಡಿಲ್ಲದ ಸಿ.ಟಿ. ರವಿ ಅವರನ್ನು ಸದನದ ಒಳಗೆ ನಡೆದ ಪ್ರಕರಣದ ಮೇಲೆ ಹೇಗೆ ಪೊಲೀಸರು ಬಂಧಿಸಿದರು? ಹಾಗೆ ಒಂದು ವೇಳೆ ಬಂಧಿಸಿದರೂ ಮ್ಯಾಜಿಸ್ಟ್ರೇಟ್ ಮುಂದೆ ಹಾಜರುಪಡಿಸಬೇಕಿತ್ತು. ಅದಕ್ಕೂ ಮೊದಲು ಮೆಡಿಕಲ್ ಎಕ್ಸಾಮಿನೇಷನ್ ಮಾಡಬೇಕಿತ್ತು. ಇದ್ಯಾವುದನ್ನು ಮಾಡದೆ ನೇರ ಜೈಲಿಗೆ ಹಾಕುವ ಕೆಲಸ ಮಾಡಿರುವುದು ಕಾಂಗ್ರೆಸ್‌ನ ದ್ವೇಷ ರಾಜಕಾರಣಕ್ಕೆ ಹಿಡಿದ ಕೈಗನ್ನಡಿಯಲ್ಲದೆ ಮತ್ತೇನು ಎಂದು ಪ್ರಶ್ನಿಸಿದರು.

ಈ ಹಿಂದೆ ಬೆಂಗಳೂರಿನ ವಿಧಾನಸೌಧದಲ್ಲಿ ಪಾಕಿಸ್ತಾನ್ ಜಿಂದಾಬಾದ್ ಎಂದು ಕೂಗಿದ್ದು ಕಾಂಗ್ರೆಸ್‌ನವರಿಗೆ ನಜೀರ್‌ಸಾಬ್ ಜಿಂದಾಬಾದ್ ಎಂದು ಕೇಳಿದೆ. ಆದರೆ, ಪಾಕಿಸ್ತಾನ ಜಿಂದಾಬಾದ್ ಎಂದು ಕೂಗಿದ್ದು ಎಫ್‌ಎಸ್‌ಎಲ್ ವರದಿ ಕೂಡ ದೃಢಪಡಿಸಿದೆ. ಪಂಚಮಸಾಲಿ ಹೋರಾಟ ಹಾಗೂ ಉ.ಕ. ಅಭಿವೃದ್ಧಿ ಕುರಿತು ಸಮರ್ಪಕ ಉತ್ತರ ಕೊಡಲು ಸಾಧ್ಯವಾಗದ ಕಾಂಗ್ರೆಸ್ ತನ್ನ ವೈಫಲ್ಯ ಮುಚ್ಚಿಕೊಳ್ಳಲು ಇಂತಹ ಡ್ರಾಮಾಗೆ ಕೈಹಾಕಿದೆ ಎಂದು ಆರೋಪಿಸಿದರು. ಶಾಸಕ ಅಭಯ ಪಾಟೀಲ, ಬಿಜೆಪಿ ಗ್ರಾಮೀಣ ಜಿಲ್ಲಾಧ್ಯಕ್ಷ ಸುಭಾಷ ಪಾಟೀಲ ಇತರರು ಇದ್ದರು.

# ಮೋಟಗಿಮಠದಲ್ಲಿ ಸಾಮರಸ್ಯದ ಸಮಾಜೋತ್ಸವ

## ಬೆಳಗಾವಿಯ ನಾಗನೂರು ರುದ್ರಾಕ್ಷಿಮಠದ ಡಾ.ಅಲ್ಲಮಪ್ರಭು ಸ್ವಾಮೀಜಿ ಮಾಹಿತಿ

● **ಕನ್ನಡಪ್ರಭ ವಾರ್ತೆ** ಬೆಳಗಾವಿ

ಅಥಣಿ ಮೋಟಗಿಮಠದ ಲಿಂ.ಚನ್ನಬಸವ ಶಿವಯೋಗಿಗಳವರ ಲಿಂಗೈಕ್ಯ ಶತಮಾನೋತ್ಸವ ಹಿನ್ನೆಲೆಯಲ್ಲಿ ಜನವರಿ 10 ರಿಂದ 13 ರವರೆಗೆ ಸಾಮರಸ್ಯದ ಸಮಾಜೋತ್ಸವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಬೆಳಗಾವಿಯ ನಾಗನೂರು ರುದ್ರಾಕ್ಷಿಮಠದ ಡಾ.ಅಲ್ಲಮಪ್ರಭು ಸ್ವಾಮೀಜಿ ತಿಳಿಸಿದರು.

ನಗರದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಥಣಿ ಮೋಟಗಿ ಮಠದ ಪ್ರಭು ಚನ್ನಬಸವ ಸ್ವಾಮೀಜಿ ನೇತೃತ್ವದಲ್ಲಿ ಈ ಕಾರ್ಯಕ್ರಮ ನಡೆಯಲಿದೆ. ಜ.10 ರಂದು ಬೆಳಗ್ಗೆ 9 ಗಂಟೆಗೆ ಅಥಣಿ ಗಚ್ಚಿನಮಠದ ಶಿವಬಸವ ಸ್ವಾಮೀಜಿ ಷಟ್‌ಸ್ಥಲ ಧ್ವಜಾರೋಹಣ ನೆರವೇರಿಸುವರು. ಕಸಾಪ ಜಿಲ್ಲಾಧ್ಯಕ್ಷೆ ಮಂಗಲಾ ಮೆಟಗುಡ್ಡ ಕನ್ನಡ ಧ್ವಜಾರೋಹಣ ಮಾಡುವರು. ಅಂದು ಸಂಜೆ 6 ಗಂಟೆಗೆ ಬಸವಚರಿತಾಮೃತ ಪ್ರವಚನ ಮಂಗಲೋತ್ಸವ ನಡೆಯಲಿದೆ. ಕಲಬುರ್ಗಿ ಶ್ರೀಶೈಲಂ ಜಗದ್ಗುರು ಸಾರಂಗಮಠದ ಡಾ.ಜಗದ್ಗುರು ಸಾರಂಗಧರ ದೇಶಿಕೇಂದ್ರ ಸ್ವಾಮೀಜಿ ಮತ್ತು ಬಳ್ಳಾರಿ ಹೊಸಪೇಟೆ ಹಾಲಕೇರಿ ಕೊಟ್ಟೂರು ಸ್ವಾಮಿ ಸಂಸ್ಥಾನಮಠದ ಜಗದ್ಗುರು ಕೊಟ್ಟೂರು ಬಸವಲಿಂಗ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಇಂಚಲ ಸಾಧುಸಂಸ್ಥಾನ ಮಠದ ಡಾ.ಶಿವಾನಂದ ಭಾರತಿ ಸ್ವಾಮೀಜಿ ಮತ್ತು ಗುಳೇದಗುಡ್ಡ ಜಗದ್ಗುರು ಗುರುಸಿದ್ದೇಶ್ವರ ಬೃಹನ್ಮಠದ ಬಸವರಾಜ ಪಟ್ಟದಾರ್ಯ ಸ್ವಾಮೀಜಿ ಗುರುವಂದನ ಕಾರ್ಯಕ್ರಮ ಜರುಗಲಿದೆ.

11 ರಂದು ಬೆಳಗ್ಗೆ 10.30 ಗಂಟೆಗೆ ಚನ್ನಬಸವ ಶಿವಯೋಗಿಗಳವರ ಲಿಂಗೈಕ್ಯ ಶತಮಾನೋತ್ಸವ ಉದ್ಘಾಟನಾ ಸಮಾರಂಭ ಸುತ್ತೂರು ಜಗದ್ಗುರು ವೀರಸಿಂಹಾಸನ ಸಂಸ್ಥಾನ ಮಠದ ಜಗದ್ಗುರು ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ತುಮಕೂರು ಸಿದ್ಧಗಂಗಾ ಮಠದ ಸಿದ್ಧಲಿಂಗ ಸ್ವಾಮೀಜಿ ಮತ್ತು ಗದುಗಿನ ಜಗದ್ಗುರು ಎಡೆಯೂರು ತೋಂಟದಾರ್ಯ ಸಂಸ್ಥಾನ ಮಠದ ಡಾ.ತೋಂಟದ ಸಿದ್ಧರಾಮ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ರುದ್ರಾಕ್ಷಿಮಠದ ಡಾ.ಅಲ್ಲಮಪ್ರಭು ಸ್ವಾಮೀಜಿ ನೇತೃತ್ವ ವಹಿಸುವರು. ಸುಪ್ರೀಂಕೋರ್ಟ್ ನ್ಯಾಯಮೂರ್ತಿ ಶಿವರಾಜ ಪಾಟೀಲ ಕಾರ್ಯಕ್ರಮ ಉದ್ಘಾಟಿಸಲಿದ್ದು, ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಅಧ್ಯಕ್ಷತೆ ವಹಿಸುವರು. ಡಾ.ಸಂತೋಷ ಹಾನಗಲ್ ಸಂಪಾದಕತ್ವದ ಮಹಾತ್ಮರ ಚರಿತಾಮೃತ ಅವಲೋಕನ ಕೃತಿಯ ಲೋಕಾರ್ಪಣೆಯನ್ನು ಶಾಸಕ ಲಕ್ಷ್ಮಣ ಸವದಿ ನೆರವೇರಿಸುವರು. ಸಲಿದ್ದಾರೆ. ಇದೇ ಸಂದರ್ಭದಲ್ಲಿ ಲಂಡನ್ ನ ಅಂತರಾಷ್ಟ್ರೀಯ ಬಸವ ಪ್ರತಿಷ್ಠಾನದ ಅಧ್ಯಕ್ಷ ಎಸ್. ಮಹಾದೇವಯ್ಯ ಅವರಿಗೆ ಬಸವಭೂಷಣ ಪ್ರಶಸ್ತಿ ಮತ್ತು ಜಮಖಂಡಿ ಶಾಸಕ ಜಗದೀಶ ಗುಡಗುಂಟಿಮಠ ಸೇರಿ ಹಲವರಿಗೆ ಸಮಾಜ ಸೇವಾ ಭೂಷಣ ಪ್ರಶಸ್ತಿ ಪ್ರದಾನ ಮಾಡಲಾಗುವುದು.

12 ರಂದು ಬೆಳಗ್ಗೆ 10-30 ಗಂಟೆಗೆ ಗಡಿ ಕನ್ನಡ ಸಾಹಿತ್ಯ ಮತ್ತು ಸಾಂಸ್ಕೃತಿಕ ಸಮ್ಮೇಳನ ಜರುಗಲಿದೆ. ಕನ್ನಡ ಸಾಹಿತ್ಯ ಪರಿಷತ್ ರಾಜ್ಯಾಧ್ಯಕ್ಷ ನಾಡೋಜ ಡಾ ಮಹೇಶ್ ಜೋಶಿ ಉದ್ಘಾಟಿಸುವರು. ಚಿಕ್ಕೋಡಿ ಸಂಸದೆ ಪ್ರಿಯಾಂಕಾ ಜಾರಕಿಹೊಳಿ ಅಧ್ಯಕ್ಷತೆ ವಹಿಸಲಿದ್ದಾರೆ. ನಂತರ ಸಂಗೀತ ಕಾರ್ಯಕ್ರಮ ಜರುಗಲಿದ್ದು, ಕಲಬುರ್ಗಿಯ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಪಂ.ಫಕೀರೇಶ ಕಣವಿ, ಖ್ಯಾತ ಗಾಯಕರಾದ ಕುಮಾರ್ ಕಣವಿ ಮತ್ತು ಮಾಲಾಶ್ರೀ ಕಣವಿ ಭಾಗವಹಿಸಲಿದ್ದು, ಪಂಚಾಕ್ಷರಿ ಕಣವಿ ತಬಲಾ ಸಾಥ್ ನೀಡಲಿದ್ದಾರೆ.

13 ರಂದು ಬೆಳಗ್ಗೆ 8 ಗಂಟೆಗೆ ಅಥಣೀಶರ ಸೇವಾ ಕಾಯಕದ ಬೆಳ್ಳಿ ಹಬ್ಬದ ನೆನಹಿನಲ್ಲಿ ಹರಗುರು ಚರಮೂರ್ತಿಗಳ ಪಾದಪೂಜೆ ಸಮಾರಂಭ ನಡೆಯಲಿದೆ. ಸಂಜೆ 6 ಗಂಟೆಗೆ ಶ್ರೀ ಗುರುಬಸವೇಶ್ವರ ವಿದ್ಯಾ ವಿಕಾಸ ಸಂಸ್ಥೆಯ ಬೆಳ್ಳಿಹಬ್ಬ ಕಾರ್ಯಕ್ರಮ ನಡೆಯಲಿದ್ದು, ಸಚಿವೆ ಲಕ್ಷ್ಮೀ ಹೆಬ್ಬಾಳಕರ ಅಧ್ಯಕ್ಷತೆ ವಹಿಸುವರು. ಇದೇ ವೇಳೆ ಸಮಾಜ ಸೇವಾಭೂಷಣ ಪ್ರಶಸ್ತಿ ಪ್ರದಾನ ಮಾಡಲಾಗುವುದು.

ಸಾಮರಸ್ಯದ ಸಮಾಜೋತ್ಸವ ಕಾರ್ಯಕ್ರಮದ ಹಿನ್ನೆಲೆಯಲ್ಲಿ 101 ಭಕ್ತರಿಗೆ ತುಲಾಭಾರ, 101 ಪೌರಕಾರ್ಮಿಕರಿಗೆ ಗೌರವ ಶ್ರೀರಕ್ಷೆ ಹಾಗೂ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ 101 ಗಡಿನಾಡಿನ ಪ್ರತಿಭಾವಂತ ಯುವಕರಿಗೆ ಗೌರವ ಪುರಸ್ಕಾರ ಪ್ರದಾನ ಮಾಡಲಾಗುವುದು ಎಂದು ಹೇಳಿದರು. ಸುದ್ದಿಗೋಷ್ಠಿಯಲ್ಲಿ ಅಥಣಿ ಮೋಟಗಿಮಠದ ಪ್ರಭು ಚನ್ನಬಸವ ಸ್ವಾಮೀಜಿ, ಮಹಾಂತ ಸ್ವಾಮೀಜಿ ಉಪಸ್ಥಿತರಿದ್ದರು.

# ಮ್ಯಾರಥಾನ್ ಓಟ ದೈಹಿಕ ಶಕ್ತಿ, ಮಾನಸಿಕತೆಗೂ ಪ್ರೇರಣೆ

● **ಕನ್ನಡಪ್ರಭ ವಾರ್ತೆ** ಬೈಲಹೊಂಗಲ

ಮ್ಯಾರಥಾನ್ ಓಟ ದೈಹಿಕ ಶಕ್ತಿಗೆ ಮಾತ್ರವಲ್ಲ ಮಾನಸಿಕತೆಗೂ ಪ್ರೇರಣೆಯಾಗಿದೆ ಎಂದು ಬೆಂಗಳೂರಿನ ಸಮರ್ಥನಂ ಅಂಗವಿಕಲರ ಸಂಸ್ಥೆ ಸಂಸ್ಥಾಪಕ ಮಹಾಂತೇಶ ಕಿವಡಸಣ್ಣವರ ಹೇಳಿದರು.

ಪಟ್ಟಣದ ಕೆಆರ್‌ಸಿಇ ಎಸ್ ಆಂಗ್ಲ ಮಾಧ್ಯಮ ಶಾಲೆ ಮೈದಾನದಲ್ಲಿ ನಡೆದ ಮಾ ಭಾರತಿ ಸೇವಾ ಫೌಂಡೇಶ ಅನಿಗೋಳ, ರೋಟರಿ ಕ್ಲಬ್ ಬೈಲಹೊಂಗಲ ಸಹಯೋಗದಲ್ಲಿ ದ್ವಿತೀಯ ಬಾರಿಗೆ ಕೆಎ 24 ಮ್ಯಾರಾಥನ್ ಗೆ ಚಾಲನೆ ನೀಡಿ ಮಾತನಾಡಿದರು.

ಆಸ್ಟ್ರೇಲಿಯನ್ ಐರನ್ ಮ್ಯಾನ್ ಡಾ.ಸತೀಶ ಚೌಲಗೇರೆ ಮಾತನಾಡಿ, ನಿರಂತರ ಪ್ರಯತ್ನದಿಂದ ಒಂದೇ ದಿನದಲ್ಲಿ ಸೈಕ್ಲಿಂಗ್, ಸ್ವಿಮ್ಮಿಂಗ್, ರನ್ನಿಂಗ್ ಮಾಡಿ ಐರನ್ ಮ್ಯಾನ್ ಆಗಿದ್ದೇನೆ. ನನ್ನ ಸಾಧನೆ ಇತರರಿಗೆ ಪ್ರೇರಣೆಯಾದರೆ ಸಾಧನೆಗೆ ಫಲ ಸಿಕ್ಕಂತಾಗುವುದು ಎಂದು ಹೇಳಿದರು.

ಪುರುಷ ವಿಭಾಗದಲ್ಲಿ ಸುನೀಲ ದಂಡಾಯಿ ಪ್ರಥಮ, ಅಸ್ಲಾಂ ನಸ್ಲಾಪುರೆ ದ್ವಿತೀಯ, ಈರಪ್ಪ ಹುಲಗನ್ನವರ ತೃತೀಯ, ಸಿದ್ದಪ್ಪ ನರಸಣ್ಣವರ ಚತುರ್ಥ, ಪಂಚಮ ಬಸಯ್ಯ ಪೂಜೇರ ಐದನೇ ಸ್ಥಾನ, ಮಹಿಳಾ ವಿಭಾಗದಲ್ಲಿ ನಕೋಶ ಮಂಗನಾಕರ ಪ್ರಥಮ, ಎಸ್. ಆರ್. ಶಾಹಿನ್ ದ್ವಿತೀಯ, ಶೋಭಾ ಕಾಕತಕರ ತೃತೀಯ, ದನಶ್ರೀ ಪಾಟೀಲ ಚತುರ್ಥ, ನಿಖಿತಾ ಚವ್ಹಾಣ ಐದನೇ ಬಹುಮಾನ ಪಡೆದುಕೊಂಡರು.

ಬೆಳವಡಿಯ 64 ವರ್ಷದ ವೃದ್ಧ ಬಸವರಾಜ ಹುಂಬಿ ಅವರ ಓಟ ನೋಡುಗರ ಮನ ಸೆಳೆಯಿತು. ಶಾಸಕ ಬಾಬಾಸಾಹೇಬ ಪಾಟೀಲ, ಮಾಜಿ ಶಾಸಕ ವಿ.ಐ. ಪಾಟೀಲ, ಉದ್ಯಮಿ ವಿಜಯ ಮೆಟಗುಡ್ಡ, ಚಿತ್ರನಟ ಶಿವರಂಜನ ಬೊಳಣ್ಣವರ, ಪುರಸಭೆ ಅಧ್ಯಕ್ಷ ವಿಜಯ ಬೊಳಣ್ಣವರ, ಸಂಜೀವಗೌಡ ಪಾಟೀಲ, ತಹಸೀಲ್ದಾರ ಎಚ್.ಎನ್. ಶಿರಹಟ್ಟಿ, ಮಹಾಂತೇಶ ತುರಮರಿ, ಮಾ ಭಾರತಿ ಸೇವಾ ಫೌಂಡೇಶನ್ ಸಂಸ್ಥಾಪಕ ಅಧ್ಯಕ್ಷ ಸುನೀಲ ಮರಕುಂಬಿ, ರೋಟರಿ ಕ್ಲಬ್ ಅಧ್ಯಕ್ಷ ಮಹಾಂತೇಶ ಜಿಗಜಿನ್ನಿ, ಆಯೋಜಕರು ಮಾ ಭಾರತಿ ಸೇವಾ ಫೌಂಡೇಶನ್ ಹಾಗೂ ರೋಟರಿ ಕ್ಲಬ್ ಪದಾಧಿಕಾರಿಗಳು, ಸದಸ್ಯರು ಇದ್ದರು.

# ಮಾದರಿ ಗ್ರಾಮವಾಗಿಸಲು ಗ್ರಾಮಸ್ಥರ ಸಹಕಾರ ಅಗತ್ಯ

## ನಲ್ಲಾನಟ್ಟಿಯಲ್ಲಿ ಸಮುದಾಯ ಭವನ ಉದ್ಘಾಟಿಸಿದ ರಾಜ್ಯಸಭಾ ಸಂಸದ ಈರಣ್ಣ ಕಡಾಡಿ

● **ಕನ್ನಡಪ್ರಭ ವಾರ್ತೆ** ಘಟಪ್ರಭಾ

ನಲ್ಲಾನಟ್ಟಿ ಗ್ರಾಮ ಹಿಂದುಳಿದ ಸಮಾಜದವರಿಂದಲೇ ಕೂಡಿದ್ದರೂ ಸಹ ಸತತ ಪರಿಶ್ರಮದ ಮೂಲಕ ಆರ್ಥಿಕ, ಶೈಕ್ಷಣಿಕ, ಧಾರ್ಮಿಕವಾಗಿ ಬೆಳೆಯುವ ಮೂಲಕ ಗ್ರಾಮದ ಮಹಾಲಕ್ಷ್ಮೀದೇವಿ ಆವರಣದಲ್ಲಿ ಹಲವಾರು ದೇವಸ್ಥಾನ ನಿರ್ಮಾಣ ಮಾಡುವ ಮೂಲಕ ತಾಲೂಕಿಗೆ ಮಾದರಿಯಾಗಿದ್ದಾರೆ ಎಂದು ರಾಜ್ಯಸಭಾ ಸಂಸದ ಈರಣ್ಣ ಕಡಾಡಿ ಗ್ರಾಮಸ್ಥರ ಕಾರ್ಯವನ್ನು ಶ್ಲಾಘಿಸಿದರು.

ಸೋಮವಾರ ತಾಲೂಕಿನ ನಲ್ಲಾನಟ್ಟಿ ಗ್ರಾಮದ ಲಕ್ಷ್ಮೀದೇವಿ ದೇವಸ್ಥಾನ ಹತ್ತಿರ ರಾಜ್ಯಸಭಾ ಸಂಸದರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿ ನಿರ್ಮಿಸಿರುವ ಸಮುದಾಯ ಭವನ ಉದ್ಘಾಟಿಸಿ ಮಾತನಾಡಿದ ಸಂಸದ ಈರಣ್ಣ ಕಡಾಡಿ ಅವರು, ಗ್ರಾಮದೇವತೆ ಲಕ್ಷ್ಮೀದೇವಿ ದೇವಸ್ಥಾನವನ್ನು ಜೀರ್ಣೋದ್ಧಾರ ಮಾಡಿರುವುದು ಈ ಭಾಗದ ಭಕ್ತರಿಗೆ ಅನುಕೂಲವಾಗಲಿದೆ. ಇಂತಹ ಮಹತ್ಕಾರ್ಯಕ್ಕೆ ಗ್ರಾಮದ ಜನರು ಕೈಜೋಡಿಸಿ ಶ್ರದ್ಧಾಭಕ್ತಿಯಿಂದ ನಿಸ್ವಾರ್ಥತೆಯಿಂದ ಸೇವೆ ಸಲ್ಲಿಸಿದಾಗ ಮಾತ್ರ ದೇವಸ್ಥಾನದ ಅಭಿವೃದ್ಧಿ ಆಗಲು ಸಾಧ್ಯ ಎಂದು ಹೇಳಿದರು.

ಗ್ರಾಮದ ಸಾರ್ವಜನಿಕರಿಗೆ ಉತ್ತಮ ಸೇವೆ ನೀಡುವ ಉದ್ದೇಶದಿಂದ ನಲ್ಲಾನಟ್ಟಿ ಗ್ರಾಮವನ್ನು ಸಂಸದರ ಆದರ್ಶ ಗ್ರಾಮವನ್ನಾಗಿಸಲು ರಸ್ತೆ, ಶೌಚಾಲಯ, ಕುಡಿಯುವ ನೀರು, ಶಾಲೆಗಳಿಗೆ ಮೂಲ ಸೌಲಭ್ಯ, ದೇವಸ್ಥಾನಗಳ ಅಭಿವೃದ್ಧಿಗೆ ನೀಡುತ್ತಿರುವ ಅನುದಾನವನ್ನು ಸದ್ಬಳಕೆ ಮಾಡಿಕೊಂಡು ನಲ್ಲಾನಟ್ಟಿ ಗ್ರಾಮವನ್ನು ಜಿಲ್ಲೆಯಲ್ಲಿ ಮಾದರಿ ಗ್ರಾಮವನ್ನಾಗಿ ಮಾಡಲು ಗ್ರಾಮಸ್ಥರ ಸಹಾಯ ಸಹಕಾರ ಅಗತ್ಯವಾಗಿದೆ ಎಂದರು.

ಚಿತ್ರದುರ್ಗ ಭಗೀರಥ ಪೀಠದ ಪುರುಷೋತ್ತಾನಂದಪುರಿ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಅಭಿನವರೇಶ್ವರ ಸ್ವಾಮೀಜಿ, ನಾಗೇಶ್ವರ ಸ್ವಾಮೀಜಿ, ನಿಜಗುಣ ದೇವರು, ಮಲ್ಲಿಕಾರ್ಜುನ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು.

ರಂಗಪ್ಪ ಕುಳ್ಳೂರ, ಶಂಕರ ಜಾಗನೂರ, ಅಡಿವೆಪ್ಪ ಬಿಲಕುಂದಿ, ಮಾರುತಿ ಮೆಳವಂಕಿ, ಮಲ್ಲಪ್ಪ ಪೂಜೇರಿ, ಹಣಮಂತ ಪಾಟೀಲ, ರಾಮಚಂದ್ರ ಕುಳ್ಳೂರ, ಲಗಮಣ್ಣ ಕುಳ್ಳೂರ, ರಾಮಪ್ಪ ಪೂಜೇರಿ, ಭೀಮಪ್ಪ ಪಾಟೀಲ, ಪ್ರಕಾಶ ಜಾಗನೂರ, ಮುದಕಪ್ಪ ಗದಾಡಿ, ಸ್ಥಳೀಯ ಮುಖಂಡರು, ಗ್ರಾಮಸ್ಥರು ಉಪಸ್ಥಿತರಿದ್ದರು.

ನಲ್ಲಾನಟ್ಟಿ ಗ್ರಾಮದ ಶ್ರೀ ಲಕ್ಷ್ಮೀದೇವಿ ದೇವಸ್ಥಾನದ 